ಶ್ರೀ ಮಲ್ಲಿಕಾರ್ಜುನ ಖರ್ಗೆ: ಹಿಡಿದು ಬಿಟ್ಟಿದ್ದಾರೆಂದು ನೀವು ಹೇಳುತ್ತಿದ್ದೀರಿ, ನಾನೀಗಾಗಲೇ ಹೇಳಿರುವಂತೆ ಹಿಡಿದು ಬಿಟ್ಟಿದ್ದರೆ ಯಾರು ಎನ್ನುವ ಮಾಹಿತಿಯನ್ನು ತರಿಸಿ ಕೊಳ್ಳುತ್ತೇನೆಂದು ಹೇಳಿದೆ. ಹಿಡಿದಾದ ಮೇಲೆ ನಾವು ಇದುವರೆವಿಗೂ ಯಾರನ್ನು ಬಿಟ್ಟಿಲ್ಲ. ಹಿಂದಿನ 10 ವರ್ಷಗಳ ಕೇಸ್ ಎಲ್ಲಾ ಈಗ ಹೊರಗೆ ಬರುತ್ತಿವೆ. ಬೇಕಾದರೆ ನೀವು ನೋಡಿ.

ಶ್ರೀ ಸಿ. ಭೈರೇಗೌಡ: 10 ವರ್ಷದ್ದೋ ನಲವತ್ತು ವರ್ಷದ್ದೋ ಆ ಪ್ರಶ್ನೆ ಬೇರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಿಮ್ಮ ಕಾಲದಲ್ಲಿ ಯಾರಾದರೂ ದಾಕ್ಷಿಣ್ಯಕ್ಕೆ ಒಳಗಾಗಿರಬಹುದು, ಈ ಸರ್ಕಾರ ದಾಕ್ಷಿಣ್ಯಕ್ಕೆ ಒಳಗಾಗುವುದಿಲ್ಲ, ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ. ಯಾರೇ ತಪ್ಪು ಮಾಡಿದರೂ ಕೂಡ ಅವರು ನಿಮ್ಮ ಪರವಾಗಿ ಇರಬಹುದು ನಮ್ಮ ಪರವಾಗಿ ಇರಬಹುದು ಅವರ ಮೇಲೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ ನೀವು ಸುಮ್ಮನೆ ಆಪಾದನೆ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಸಿ. ಭೈರೇಗೌಡ: ಯಾರ ಪರವಾಗಿ ಇರತಕ್ಕಂಥವರಾದರೂ ಅವರ ಮೇಲೆ ಕಾನೂನು ಚಲಾವಣೆ ಆಗಲೇಬೇಕೆಂದು ನಾನು ಹೇಳುತ್ತಿರುವುದು. ಇದು ಆಗಿಲ್ಲ ಎನ್ನುವುದಕ್ಕೆ ನನ್ನ ಹತ್ತಿರ ದಾಖಲೆ ಇದೆ. ಲೋಪವಾಗಿರುವುದರಿಂದಲೇ ಅವರನ್ನು ಸಸ್‌ಪೆಂಡ್ ಮಾಡಿ ಎಂದು ಕೇಳುತ್ತಿರುವುದು.

SRI MALLIKARJUNA KHARGE: Let me see the report. I cannot take action on the oral information.

ಅಧ್ಯಕ್ಷರು: ರೆಕಾರ್ಡ್ ನೋಡಿ ಮಾಡುತ್ತೇವೆಂದು ಹೇಳುತ್ತಿದ್ದಾರಲ್ಲಾ ಬಿಡಿ.

ಶ್ರೀ ಸಿ. ಭೈರೇಗೌಡ: ಇಷ್ಟರಲ್ಲಿ ಆ ರೆಕಾರ್ಡ್ಸ್ ತರಿಸಲಿಕ್ಕೆ ಆಗುವುದಿಲ್ಲವೆ?...ನನಗೇನು ಗೊತ್ತಿದೆಯೋ ಅದನ್ನೇ ನಾನು ಹೇಳುತ್ತಿರುವುದು,..

ಶ್ರೀ ಮಲ್ಲಿಕಾರ್ಜುನ ಖರ್ಗೆ: ಆಯಿತು ತರಿಸಿಕೊಂಡು ನೋಡುತ್ತೇನೆ.

12. ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ

ಶ್ರೀ ಸಿ. ಭೈರೇಗೌಡ(ವೇಮಗಲ್): ಅವರು ಅದೇನು ಕ್ರಮ ತೆಗೆದುಕೊಳ್ಳುತಾರೋ ನೋಡೋಣ ಈಗ ಮತ್ತೊಂದು ವಿಷಯ ಏನೆಂದರೆ, ಸಮಯದ ಅಭಾವವಿರುವುದರಿಂದ ನಾನು ವಿವರಕ್ಕೆ ಹೋಗುವುದಿಲ್ಲ. ಮಂಡ್ಯದಲ್ಲಿರುವ ಮೈಷುಗರ್ ಕಾರ್ಖಾನೆಯಲ್ಲಿ ತನ್ನದೇ ಆದ ಡಿಸ್ಟಿಲರಿ ಹಾಗೂ 12 ಸಾರಾಯಿ ಘಟಕಗಳನ್ನು ಹೊಂದಿದೆ. ಸಾರಾಯಿ ತಯಾರಿಸಿ ಹಂಚಿಕೆ ಮಾಡುವುದನ್ನು ಕೆಲವು ಜಿಲ್ಲೆಗಳಾದ ಮೈಸೂರು, ಮಂಡ್ಯ, ಮಂಗಳೂರು, ಹಾಸನ, ಶಿವಮೊಗ್ಗ, ಕುಶಾಲನಗರ, ಚಿಕ್ಕಮಗಳೂರು, ಹಿರಿಯೂರು, ತುಮಕೂರು, ಕೋಲಾರ, ಬೆಂಗಳೂರು ನಗರ ಮತ್ತು ಗ್ರಾಮಾಂತರ, ಈ ಜಿಲ್ಲೆಗಳಿಗೆ ಮೈಸೂರು ಸಕ್ಕರೆ ಕಾರ್ಖಾನೆಗೆ ಸಾರಾಯಿಯನ್ನು ಸ್ಯಾಚೆಟ್ ಮಾಡಿ ಹಂಚತಕ್ಕಂಥ ಕೆಲಸ ಕೊಟ್ಟಿರುತ್ತಾರೆ. 1998:ರಲ್ಲಿ 78,531ಲೀಟರ್ ಸಾರಾಯಿ ನಾಪತ್ತೆ ಆಗುತ್ತದೆ, ಪ್ರತಿನಿತ್ಯ ಇಲ್ಲಿ ಇಂಥ ದುರ್ವ್ಯವಹಾರ ಎಷ್ಟಾಗುತ್ತಿದೆ, ಇದಕ್ಕೆ ಎಷ್ಟು ಬೆಲೆ ಆಗುತ್ತದೆ, ಎನ್ನುವ ಎಲ್ಲಾ ವಿವರ ನನ್ನ ಹತ್ತಿರ ಇದೆ.

ಇದರಲ್ಲಿ ಸುಮಾರು ನೂರಾರು ಕೋಟಿ ರೂಪಾಯಿ ಅವ್ಯವಹಾರವಾಗುತ್ತಿದೆ. ಇದರ ಬಗ್ಗೆ ಕಂಪನಿ ಆಡಿಟರ್‌ರವರು ಇಷ್ಟೊಂದು ಸರಾಯಿ ಷಾರ್ಟ್ ಇದೆಯೆಂದು ಹೇಳುತ್ತಾರೆ. ಜೊತೆಗೆ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಿ ಎಂದು ಮ್ಯಾನೇಜ್‌ಮೆಂಟಿಗೆ ತಿಳಿಸಿದಾಗ, ಅವರು ಇದನ್ನು ಮುಚ್ಚಿಹಾಕುವ ಪ್ರಯತ್ನ ನಡೆಸುತ್ತಾರೆ. ಅಬಕಾರಿ ಇಲಾಖೆಯ ಮೂವರು ಜಂಟಿ ಆಯುಕ್ತರು ಹೋಗಿ ಇಲ್ಲಿ ಅವ್ಯವಹಾರವಾಗಿರುವುದು ನಿಜವೆಂದು ಹೇಳುತ್ತಾರೆ. ಹಿಂದೆ ಇದ್ದಂಥ ನಮ್ಮ ಸರ್ಕಾರದಲ್ಲಿ ನಾನು ಆ ಕಡೆ ಇದ್ದಾಗ ಇಲ್ಲಿ ಅವ್ಯವಹಾರ ನಡೆದಿದೆ ಎಂದು ಉತ್ತರ ಕೊಟ್ಟು, ಇದರ ಬಗ್ಗೆ ಅನುಮಾನ ಇರುವುದರಿಂದ ಇದನ್ನು ಸಿಒಡಿ ಗೆ ರೆಫರ್ ಮಾಡಿದ್ದೇವೆ. ಅದರಂತೆ ಸಿಒಡಿ ಗೆ ಹೋಯಿತು, ಆದರೆ ಅದು ಇಲ್ಲಿಯವರೆಗೆ The report has not seen the light of the day. ಇದಕ್ಕೇನು ಕಾರಣ? ನಾನು ಇದರ ವಿವರಗಳನ್ನು ಹೇಳಿ ನಿಮಗೂ ಹಾಗೂ ಇತರೆ ಬೇರೆ ಸದಸ್ಯರುಗಳಿಗೆ ಬೇಜಾರು ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್: ಮುಂದಿನ ಅಧಿವೇಶನದಲ್ಲಿ ಹೇಳಿ ಇದೇನು ಕೊನೆಯ ಅಧಿವೇಶನವೆ?

ಅಧ್ಯಕ್ಷರು: ಮಾನ್ಯ ಭೈರೇಗೌಡರವರೆ, ಮಾನ್ಯ ಸದಸ್ಯರೆಲ್ಲರೂ ರೈಲಿಗೆ ಹೋಗುವ ಆತುರದಲ್ಲಿದ್ದಾರೆ ಆದ್ದರಿಂದ ತಾವು ಬೇಗ ಮುಗಿಸಿ.

ಶ್ರೀ ಸಿ. ಭೈರೇಗೌಡ: ಒಂದೂವರೆ ವರ್ಷವಾಯಿತು, ಇದರ ಬಗ್ಗೆ ಏನೂ ಮಾಡಿಲ್ಲ ಅದನ್ನು ಮುಚ್ಚಿ ಹಾಕುವ ಪ್ರಯತ್ನ ನಡೆಯುತ್ತಿದೆ.

ಶ್ರೀ ಎ. ಕೃಷ್ಣಪ್ಪ(ಮಾನ್ಯ ಸಕ್ಕರೆ ಸಚಿವರು): ಮಾನ್ಯ ಸಭಾಧ್ಯಕ್ಷರೆ ದಯಮಾಡಿ ತಾವು ಕ್ಷಮಿಸಬೇಕು, ಇದಕ್ಕೆ ನೀವು ಏನಾದರೊಂದು ಅವಕಾಶ ಹೇಳಿ ರೆಫರ್ ಮಾಡಿದಿರಿ ಅಥವಾ ನಮ್ಮ ಸರ್ಕಾರದ ಗಮನಕ್ಕೆ ಕೊಟ್ಟರೆ ನಾವು ತಯಾರಿಸಿ ಬಂದು ಹೇಳಬಹುದು. ಸಿಒಡಿ ತನಿಖೆ ಮುಚ್ಚಿ ಹಾಕಿದ್ದಾರೆ, ಅದು ಆ ರೀತಿ ಮಾಡಿದ್ದಾರೆಂದು ಅವರು ಹೇಳುತ್ತಿದ್ದರೆ ನಮಗೆ ಉತ್ತರ ಕೊಡಲು ಕಷ್ಟವಾಗುತ್ತದೆ.

ಅಧ್ಯಕ್ಷರು: ಮಾನ್ಯ ಭೈರೇಗೌಡರವರೆ ತಾವು ಕನ್‌ಕ್ಲೂಡ್ ಮಾಡಿಬಿಡಿ.

ಶ್ರೀ ಬಿ. ಸೋಮಶೇಖರ್: ಇದೇ ವಿಚಾರವಾಗಿ ಮಾತನಾಡುವಾಗ ಮಾನ್ಯ ಮುಖ್ಯ ಮಂತ್ರಿಗಳು, ಸಿಒಡಿ ವರದಿ ಬಂದಿದ್ದು ನಾನು ನಿಮಗೆ ಕಳುಹಿಸಿಕೊಡುತ್ತೇನೆಂದು ಹೇಳಿದ್ದರು. ಇದುವರೆವಿಗೂ ಕಳುಹಿಸಿಕೊಟ್ಟಿಲ್ಲ, ಅದನ್ನು ಮುಚ್ಚಿ ಹಾಕುತ್ತಾರೆನ್ನುವ ಅನುಮಾನ ಬರುತ್ತಿದೆ, ಅದಕ್ಕಾಗಿ ನಾವು ಇದನ್ನು ಹೇಳಬೇಕಾಯಿತು.

ಶ್ರೀ ಎ. ಕೃಷ್ಣಪ್ಪ: ತರಿಸಿಕೊಡುತ್ತೇವೆ.

ಶ್ರೀ ಸಿ. ಭೈರೇಗೌಡ: ವರದಿಯನ್ನು ಕೊಡುತ್ತೇವೆಂದು ಸದನದಲ್ಲಿ ಹೇಳಿದ್ದಾರೆ. ಕೊನೆ ಪಕ್ಷ ಅದನ್ನಾದರೂ ಕೊಟ್ಟರೆ ನಾವು ತೃಪ್ತಿಪಟ್ಟುಕೊಳ್ಳುವುದು ಬೇಡವೆ? ಅದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಂಡಿದೆಯನ್ನುವ ತೃಪ್ತಿಯಾದರೂ ಆಗುತ್ತದೆ. ಆ ವರದಿಯನ್ನು ಕಳುಹಿಸಿ ಕೊಡಲಿಕ್ಕೆ ವ್ಯವಸ್ಥೆ ಮಾಡಿ.

ಶ್ರೀ ಎ. ಕೃಷ್ಣಪ್ಪ: ಸರ್ಕಾರಕ್ಕೆ ಅದನ್ನು ಮುಚ್ಚಿಹಾಕಬೇಕೆನ್ನುವ ಇಚ್ಛೆಯಿಲ್ಲ ಅದನ್ನು ಬಿಚ್ಚಿ ಇಡುತ್ತೇವೆ, ಇದರ ಬಗ್ಗೆ ಸರ್ಕಾರಕ್ಕೇನೂ ಭಯವಿಲ್ಲ, ಮುಚ್ಚಿ ಹಾಕಬೇಕಾದ ಅವಶ್ಯಕತೆ ಇಲ್ಲ.

ಶ್ರೀ ಸಿ. ಭೈರೇಗೌಡ: 2-3 ದಿವಸದೊಳಗೆ ಆ ವರದಿ ಕಳುಹಿಸಿ ಕೊಡಿ.

ಅಧ್ಯಕ್ಷರು: ತಾವು ಪ್ರಸ್ತಾಪಿಸಿದ್ದೀರಿ ಸರ್ಕಾರದವರು ಉತ್ತರ ಕಳುಹಿಸುತ್ತಾರೆ ಬಿಡಿ.

ಅಧ್ಯಕ್ಷರು: ಈಗ ಒಂದು ಪ್ರಕಟಣೆ

13. ಸದನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಹನ್ನೊಂದನೆಯ ವಿಧಾನ ಸಭೆಯ ಮೂರನೇ ಅಧಿವೇಶನವು ದಿನಾಂಕ 26ನೇ ಫೆಬ್ರವರಿ 2001 ರಂದು ಜಂಟಿ ಅಧಿವೇಶನದೊಂದಿಗೆ ಸಮಾವೇಶಗೊಂಡಿತು. ಸದರಿ ಅಧಿವೇಶನದಲ್ಲಿ 21 ದಿನಗಳು ಅಧಿವೇಶನವನ್ನು ನಡೆಸಿ, ಒಟ್ಟು 101 ಗಂಟೆಗಳ ಕಾಲ ಸರ್ಕಾರಿ ಮತ್ತು ಖಾಸಗಿ ಕಾರ್ಯಕಲಾಪಗಳನ್ನು ನಡೆಸಿರುತ್ತದೆ.

ಕರ್ನಾಟಕದ ಘನತೆವೆತ್ತ ರಾಜ್ಯಪಾಲರು ಅಧಿವೇಶನದ ಪ್ರಾರಂಭದ ದಿನದಂದು ಅಂದರೆ ದಿನಾಂಕ 26ನೇ ಫೆಬ್ರವರಿ 2001 ರಂದು ವಿಧಾನ ಮಂಡಲದ ಉಭಯ ಸದನಗಳನ್ನುದ್ದೇಶಿಸಿ ಭಾಷಣ ಮಾಡಿರುತ್ತಾರೆ. ತದನಂತರ, ವಂದನಾರ್ಪಣಾ ಪ್ರಸ್ತಾವದ ಮೇಲಿನ ಚರ್ಚೆಯು 12.00 ಗಂಟೆಗಳ ಕಾಲ ನಡೆದಿದ್ದು, ಒಟ್ಟು 12 ಜನ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಲು ಸದಾವಕಾಶ ಕಲ್ಪಿಸಲಾಗಿದೆ. ಸನ್ಮಾನ್ಯ ಮುಖ್ಯ ಮಂತ್ರಿಗಳು 23ನೇ ಮಾರ್ಚ್, 2001 ರಂದು ಚರ್ಚೆಗೆ ಉತ್ತರ ನೀಡುವ ಮೂಲಕ ವಂದನಾರ್ಪಣಾ ನಿರ್ಣಯವನ್ನು ಸದನವು ಅಂಗೀಕರಿಸಿದೆ.

ಅಧಿವೇಶನದ ಎರಡನೆಯ ದಿನದಂದು, ಗುಜರಾತ್ ರಾಜ್ಯದಲ್ಲಿ ಜನವರಿ 26 ರಂದು ಸಂಭವಿಸಿದ ಭೂಕಂಪದಲ್ಲಿ ಅಸಂಖ್ಯಾತ ಜನರು ನಿಧನರಾದ ಬಗ್ಗೆ ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಜೆ.ಹೆಚ್. ಪಟೇಲ್, ಮಾಜಿ ಸಚಿವರಾದ ಡಾ।। ಚೀವರಾಜ್ ಆಳ್ವ ಹಾಗೂ ವಿಧಾನಸಭೆಯ ಮಾಜಿ ಉಪಾಧ್ಯಕ್ಷರಾಗಿದ್ದ ಶ್ರೀ ಲಕ್ಷ್ಮೀನರಸಿಂಹಯ್ಯ ಮತ್ತು ಇತರರ ಗೌರವಾರ್ಥ ಸಂತಾಪ ನಿರ್ಣಯಗಳನ್ನು ಮಂಡಿಸಿ, ಅಂಗೀಕರಿಸಲಾಗಿದೆ.

ಸನ್ಮಾನ್ಯ ಮುಖ್ಯಮಂತ್ರಿಗಳು 2001-2002ನೇ ಸಾಲಿನ ಆಯವ್ಯಯವನ್ನು ದಿನಾಂಕ 26-3-2001 ರಂದು ಮಂಡಿಸಿದರು. ಆಯವ್ಯಯದ ಮೇಲಿನ ಚರ್ಚೆಯಲ್ಲಿ 24 ಜನ ಸದಸ್ಯರು ಭಾಗವಹಿಸಿದ್ದು, ಸುದೀರ್ಘ ಚರ್ಚೆಯ ನಂತರ, 30ನೇ ಮಾರ್ಚ್, 2001 ರಂದು, ಮುಖ್ಯಮಂತ್ರಿಗಳ ಉತ್ತರದೊಂದಿಗೆ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆಯನ್ನು ಮುಕ್ತಾಯಗೊಳಿಸಿ, ಪ್ರಸ್ತಾವನೆಯು ಅಂಗೀಕರಿಸಲ್ಪಟ್ಟು, ಜುಲೈ 31ನೇ ದಿನಾಂಕದವರೆಗೆ ಲೇಖಾನುದಾನ ಪಡೆಯಲಾಗಿರುತ್ತದೆ. ಅಲ್ಲದೆ ದಿನಾಂಕ 29ನೇ ಮಾರ್ಚ್, 2001 ರಂದು, 2000-2001ನೇ ಸಾಲಿನ ಪೂರಕ ಅಂದಾಜುಗಳನ್ನು ಸದನದಲ್ಲಿ ಮಂಡಿಸಲ್ಪಟ್ಟು ದಿನಾಂಕ 30-3-2001ರಂದು ಅಂಗೀಕರಿಸಲ್ಪಟ್ಟಿರುತ್ತದೆ.

ಈ ಅವಧಿಯಲ್ಲಿ, ಕರ್ನಾಟಕ ವಿಧಾನ ಸಭೆಯ ಕಾರ್ಯ ವಿಧಾನ ಮತ್ತು ನಡವಳಿಕೆಯ ನಿಯಮಾವಳಿಗಳಿಗೆ ತಿದ್ದುಪಡಿ ತಂದು, ಇಲಾಖೆಗಳಿಗೆ ಸಂಬಂಧಪಟ್ಟ ಹದಿನೈದು ವಿಷಯ ಸಮಿತಿಗಳನ್ನು ಪುನರ್ ರಚಿಸಿ, ಸದಸ್ಯರುಗಳಿಗೆ ಅನುದಾನ ಬೇಡಿಕೆಗಳ ಮೇಲಿನ ಚರ್ಚೆಗೆ ಹೆಚ್ಚಿನ ಅವಕಾಶವನ್ನು ಕಲ್ಪಿಸಲಾಗಿದೆ.